# <u>ಮಾಹಿತಿ ಕೈಪಿಡಿ</u>

ಉತ್ಪನ್ನದ ಧ್ಯೇಯ
ವಾಕ್ಯ

ಅಟಲ್ ಪಿಂಚಣಿ ಯೋಜನೆ

ಜನ್ ಧನ್ ನಿಂದ ಜನ್ ಸುರಕ್ಷಾ

ಭಾರತ ಸರಕಾರದಿಂದ ಖಾತರಿ ಪಿಂಚಣಿ

(ಪಿಂಚಣಿರಹಿತ ಸಮಾಜದಿಂದ ಪಿಂಚಣಿಸಹಿತ ಸಮಾಜದತ್ತ ಭಾರತ ಸರಕಾರದ ಒಂದು ಮಹತ್ವದ ನಡೆ)

*ಈ ಯೋಜನೆಯು ಭಾರತ ಸರಕಾರದ ಅನುಮೋದನೆಗೆ ಒಳಪಟ್ಟಿದೆ.

## ಅಟಲ್ ಪಿಂಚಣಿ ಯೋಜನೆಯ ಸಂಕ್ಷಿಪ್ತ ವಿವರಗಳು

❖ ಭಾರತ ಸರಕಾರವು ಬಡ ದುಡಿಮೆಗಾರರ ಇಳಿವಯಸ್ಸಿನ ಆದಾಯ ಭದ್ರತೆಯ ಬಗ್ಗೆ ಕಾಳಜಿ ಹೊಂದಿದ್ದು ಅವರ ನಿವೃತ್ತಿಯ ಅನಂತರದ ಬದುಕಿಗಾಗಿ ಉಳಿತಾಯ ಮಾಡಲು ಪ್ರೋತ್ಸಾಹ ನೀಡಿ ಬೆಂಬಲಿಸುವುದರತ್ತ ಗಮನ ಹರಿಸಿದೆ. ಅಸಂಘಟಿತ ಕ್ಷೇತ್ರದ ದುಡಿಮೆಗಾರರಲ್ಲಿ ಕಂಡುಬರುವ ದೀರ್ಘಾವಧಿ ಬದುಕಿನ ತೊಂದರೆಗಳಿಗೆ ಪರಿಹಾರ ಹೇಳಲು ಹಾಗೂ ತಮ್ಮ ನಿವೃತ್ತಿಗಾಗಿ ಇಚ್ಛಾಪೂರ್ವಕ

ಉಳಿತಾಯ ಮಾಡಲು ಅವರಿಗೆ ಪ್ರೋತ್ಸಾಹ ನೀಡಲು ಅದು ಮುಂದೆ ಬಂದಿದೆ.

- ❖ ಈ ಹಿನ್ನೆಲೆಯಲ್ಲಿ ಭಾರತ ಸರಕಾರವು 2015-16 ರ ಬಜೆಟ್ ನಲ್ಲಿ 'ಅಟಲ್ ಪಿಂಚಣಿ ಯೋಜನೆ' (ಎಪಿವೈ) ಎಂಬ ಹೆಸರಿನ ಹೊಸ ಯೋಜನೆಯೊಂದನ್ನು ಘೋಷಿಸಿದೆ. ಈ ಯೋಜನೆಯು ಅಸಂಘಟಿತ ಕ್ಷೇತ್ರದ ಎಲ್ಲ ದುಡಿಮೆಗಾರರ ಬಗ್ಗೆ ಕಾಳಜಿ ಹೊಂದಿದೆ.
- ❖ ಈ ಯೋಜನೆಯನ್ನು ಎನ್‌ಪಿಎಸ್ ವ್ಯವಸ್ಥೆಯ ಮೂಲಕ 'ಪೆನ್ಶನ್ ಫಂಡ್ ರೆಗ್ಯುಲೇಟರಿ ಆ್ಯಂಡ್ ಡೆವಲಪ್‌ಮೆಂಟ್ ಅಥಾರಿಟಿ' ಯು ನಿರ್ವಹಿಸುತ್ತದೆ.

## <u>ಅಟಲ್ ಪಿಂಚಣಿ ಯೋಜನೆಯ ಪ್ರಮುಖ ವೈಶಿಷ್ಟ್ಯಗಳು</u>

- ❖ ಎಪಿವೈಯಡಿಯಲ್ಲಿ ಚಂದಾದಾರರಿಗೆ ಮಾಸಿಕ 1000 ರೂಪಾಯಿಗಳ ಮೊತ್ತದಿಂದ 5000 ರೂಪಾಯಿಗಳ ಮೊತ್ತದವರೆಗೆ ಖಾತರಿ ಕನಿಷ್ಠ ಮಾಸಿಕ ಪಿಂಚಣಿ ಸಿಗುತ್ತದೆ.
- ❖ ಭಾರತ ಸರಕಾರವು ಈ ಕನಿಷ್ಠ ಪಿಂಚಣಿಯ ಪ್ರಯೋಜನವನ್ನು ಖಾತರಿಗೊಳಿಸುತ್ತದೆ.
- ❖ ಚಂದಾದಾರರ ದೇಣಿಗೆಯ ಶೇಕಡಾ 50 ರಷ್ಟು ಮೊತ್ತವನ್ನು ಅಥವಾ ಯಾವುದು ಕಡಿಮೆಯೋ ಅದನ್ನು ಭಾರತ ಸರಕಾರವು ಸಹದೇಣಿಗೆಯಾಗಿ ನೀಡುವುದು. ಭಾರತ ಸರಕಾರದ ಸಹ ದೇಣಿಗೆಯು ಯಾವುದೇ ಶಾಸನಬದ್ಧ  ಸಾಮಾಜಿಕ ಭದ್ರತಾ ಯೋಜನೆಗಳಲ್ಲಿ ತೊಡಗಿಕೊಳ್ಳದವರಿಗೆ ಹಾಗೂ ಆದಾಯ ತೆರಿಗೆ ಪಾವತಿದಾರರಲ್ಲದವರಿಗೆ ಮಾತ್ರ ಲಭ್ಯವಿರುತ್ತದೆ.

❖ಭಾರತ ಸರಕಾರವು 2015 ರ ದಶಂಬರ 31 ರೊಳಗೆ ಈ ಯೋಜನೆಗೆ ಸೇರುವ ಪ್ರತಿಯೊಬ್ಬ ಅರ್ಹ ಚಂದಾದಾರನಿಗೆ 5 ವರ್ಷಗಳ ಅವಧಿಗೆ ಸಹದೇಣಿಗೆಯನ್ನು ನೀಡುತ್ತದೆ. ಎಪಿವೈಯಡಿಯಲ್ಲಿ ಸರಕಾರದ ಸಹದೇಣಿಗೆಯು ವರ್ಗಾಂತರಗೊಂಡ ಸ್ವಾವಲಂಬನ್ ಫಲಾನುಭವಿಗಳೂ ಸೇರಿಕೊಂಡಂತೆ ಎಲ್ಲ ಚಂದಾದಾರರಿಗೆ 5 ವರ್ಷಗಳ ಅವಧಿಗೆ ಸೀಮಿತವಾಗಿರುತ್ತದೆ.

❖ಬ್ಯಾಂಕ್ ಉಳಿತಾಯ ಖಾತೆ ಹೊಂದಿರುವ ಎಲ್ಲರೂ ಎಪಿವೈ ಯನ್ನು ಸೇರಬಹುದಾಗಿದೆ.

**ಅರ್ಹತೆ:**

❖ ಎಪಿವೈಯು 18 ರಿಂದ 40 ರ ವಯಸ್ಸಿನೊಳಗಿನ ಎಲ್ಲ ಭಾರತೀಯ ಪ್ರಜೆಗಳಿಗೆ ಅನ್ವಯಿಸುತ್ತದೆ.

❖ ಈ ಯೋಜನೆಗೆ ಆಧಾರ್ ಪ್ರಾಥಮಿಕ 'ನಿಮ್ಮ ಗ್ರಾಹಕರನ್ನು ತಿಳಿಯಿರಿ' ದಾಖಲೆಯಾಗಿರುತ್ತದೆ.

❖ಈ ಯೋಜನೆಯ ನಿರ್ವಹಣೆಯನ್ನು ಸುಲಭಗೊಳಿಸಲು ಚಂದಾದಾರರಿಂದ ಆಧಾರ್ ಮತ್ತು ಮೊಬೈಲ್ ಸಂಖ್ಯೆಯನ್ನು ಪಡೆದುಕೊಳ್ಳಲು ಶಿಫಾರಸು ಮಾಡಲಾಗಿದೆ. ನೋಂದಣಿಯ ಸಮಯದಲ್ಲಿ ಅವುಗಳು ಲಭ್ಯವಿಲ್ಲದಿದ್ದರೆ ಮುಂದಿನ ಹಂತದಲ್ಲೂ ಆಧಾರ್ ವಿವರಗಳನ್ನು ಸಲ್ಲಿಸಬಹುದು.

**ನ್ಯೂನತೆಗೆ ದಂಡ:**

ವಿಳಂಬ ಪಾವತಿಗಳಿಗೆ ಈ ಕೆಳಗೆ ಕಾಣಿಸಿದಂತೆ ಮಾಸಿಕ 1 ರೂಪಾಯಿಯಿಂದ 10 ರೂಪಾಯಿಗಳವರೆಗೆ ಹೆಚ್ಚುವರಿ ಹಣವನ್ನು ಬ್ಯಾಂಕುಗಳು ವಸೂಲಿ ಮಾಡಬೇಕಾಗುತ್ತದೆ.

- ❖ ಮಾಸಿಕ 100ರೂಪಾಯಿಗಳ ದೇಣಿಗೆಗೆ ಮಾಸಿಕ 1 ರೂಪಾಯಿ.
- ❖ಮಾಸಿಕ 101 ರೂಪಾಯಿಗಳಿಂದ 500 ರೂಪಾಯಿಗಳವರೆಗಿನ ದೇಣಿಗೆಗೆ ಮಾಸಿಕ 2 ರೂಪಾಯಿಗಳು.
- ❖ಮಾಸಿಕ 501 ರೂಪಾಯಿಗಳಿಂದ 1000 ರೂಪಾಯಿಗಳವರೆಗಿನ ದೇಣಿಗೆಗೆ ಮಾಸಿಕ 5 ರೂಪಾಯಿಗಳು.
- ❖ ಮಾಸಿಕ 1001 ರೂಪಾಯಿಗಳಿಂದ ಹೆಚ್ಚಿನ ಮೊತ್ತದ ದೇಣಿಗೆಗೆ ಮಾಸಿಕ 10 ರೂಪಾಯಿಗಳು.

ಬಡ್ಡಿ/ದಂಡದ ನಿಶ್ಚಿತ ಮೊತ್ತವು ಚಂದಾದಾರರ ಪಿಂಚಣಿ ಮೊತ್ತದ ಭಾಗವಾಗಿ ಉಳಿಯುತ್ತದೆ.

**ಚಂದಾದಾರರಿಗೆ ಮುಖ್ಯ ಮಾಹಿತಿಗಳು:**

ದೇಣಿಗೆಯ ಪಾವತಿಯನ್ನು ನಿಲ್ಲಿಸಿದರೆ ಈ ಕೆಳಗಿನ ಸಮಸ್ಯೆಗಳು ಉಂಟಾಗಬಹುದು:

- ❖ ಆರು ತಿಂಗಳುಗಳ ಅನಂತರ ಖಾತೆಯು ಸ್ಥಗಿತಗೊಳ್ಳುತ್ತದೆ.
- ❖ಹನ್ನೆರಡು ತಿಂಗಳುಗಳ ಅನಂತರ ಖಾತೆಯು ಚಲಾವಣೆಯಲ್ಲಿರುವುದಿಲ್ಲ.
- ❖24 ತಿಂಗಳುಗಳ ಅನಂತರ ಖಾತೆಯು ಮುಚ್ಚಲ್ಪಡುತ್ತದೆ.

ದೇಣಿಗೆ ಹಣದ ಸ್ವಯಂ ವರ್ಗಾವಣೆಗೆ ಅವಶ್ಯವಿರುವಷ್ಟು ಹಣವು ಬ್ಯಾಂಕ್ ಖಾತೆಯಲ್ಲಿರುವುದನ್ನು ಚಂದಾದಾರರು ಖಾತ್ರಿ ಪಡಿಸಿಕೊಳ್ಳತಕ್ಕದ್ದು.

## ನಿರ್ಗಮನ:

❖ 60 ವರ್ಷ ವಯಸ್ಸು ತುಂಬಿದಾಗ:

ಈ ವಯಸ್ಸಿನಲ್ಲಿ ಶೇಕಡಾ 100 ರ ವಾರ್ಷಿಕ ಲೆಕ್ಕಾಚಾರದ ಪಿಂಚಣಿಯೊಂದಿಗೆ ಎಪಿವೈಯಿಂದ ಹೊರಬರಲು ಸಮ್ಮತಿಸಲಾಗಿದೆ.

❖ ಯಾವುದಾದರೂ ಕಾರಣದಿಂದ ಚಂದಾದಾರರು ತೀರಿ ಹೋದಾಗ:

ಚಂದಾದಾರರ ಸಾವಿನ ಸಂದರ್ಭದಲ್ಲಿ ಅವರ ಹೆಂಡತಿ/ಗಂಡನಿಗೆ ಪಿಂಚಣಿ ದೊರೆಯುತ್ತದೆ. ಇಬ್ಬರೂ ತೀರಿ ಹೋದರೆ (ಚಂದಾದಾರರು ಮತ್ತು ಅವರ ಪತ್ನಿ/ಗಂಡ) ಪಿಂಚಣಿ ಮೊತ್ತವನ್ನು ನಾಮ ನಿರ್ದೇಶಿತ ವ್ಯಕ್ತಿಗೆ ಮರಳಿಸಲಾಗುವುದು.

❖ 60 ವರ್ಷಕ್ಕಿಂತ ಮೊದಲು ನಿರ್ಗಮನ:

60 ರ ವಯಸ್ಸಿಗಿಂತ ಮೊದಲಿನ ನಿರ್ಗಮನಕ್ಕೆ ಫಲಾನುಭವಿಯ ಮರಣ ಅಥವಾ ಸದ್ರಿ ವ್ಯಕ್ತಿಯ ಪ್ರಾಣಾಂತಿಕ ಅನಾರೋಗ್ಯದಂತಹ ಅಪರೂಪದ ಹಾಗೂ ವಿಶಿಷ್ಟ ಸನ್ನಿವೇಶಗಳಲ್ಲಿ ಮಾತ್ರ ಸಮ್ಮತಿಸಲಾಗುವುದು.

## ಸೂಚಕ ಮಾಸಿಕ ದೇಣಿಗೆ ನಕ್ಷೆ

| ಪ್ರವೇಶ ವಯಸ್ಸು | ಮಾಸಿಕ 1000 ಪಿಂಚಣಿಗೆ | ಮಾಸಿಕ 2000 ಪಿಂಚಣಿಗೆ | ಮಾಸಿಕ 3000 ಪಿಂಚಣಿಗೆ | ಮಾಸಿಕ 4000 ಪಿಂಚಣಿಗೆ | ಮಾಸಿಕ 5000 ಪಿಂಚಣಿಗೆ |
|---|---|---|---|---|---|
| *18* | *42* | *84* | *126* | *168* | *210* |

| | | | | | |
|---|---|---|---|---|---|
| *20* | *50* | *100* | *150* | *198* | *248* |
| *25* | *76* | *151* | *226* | *301* | *376* |
| *30* | *116* | *231* | *347* | *462* | *577* |
| *35* | *181* | *362* | *543* | *722* | *902* |
| *40* | *291* | *582* | *873* | *1164* | *1454* |

**<u>ನಿರ್ವಹಣೆ</u>**

ಪೆನ್ಶನ್ ಫಂಡ್ ರೆಗ್ಯುಲೇಟರಿ ಆ್ಯಂಡ್ ಡೆವಲಪ್‌ಮೆಂಟ್ ಅಥಾರಿಟಿ,

ಮೊದಲ ಮಹಡಿ, ಐಸಿಎಡಿಆರ್ ಕಟ್ಟಡ, ನಿವೇಶನ ಸಂಖ್ಯೆ 6, ವಸಂತ್ ಕುಂಜ್

ಇನ್‌ಸ್ಟಿಟ್ಯೂಶನಲ್ ಏರಿಯಾ, ಹಂತ– II, ನವದೆಹಲಿ–110070

-----------------------------------------------------------------